

ಸಂತೋಷಿಸುತ್ತಿದ್ದೇನೆಂದು ನಟಿಸಿದರೂ ಒಳಗೊಳಗೆ ಸಣ್ಣದೊಂದು ಈರ್ಷ್ಯೆಯ ಕಿಡಿ ಹತ್ತಿಕೊಂಡುಬಿಡುತ್ತದೆ. ಸಂಬಂಧಿಗಳ ದೃಷ್ಟಿಯಲ್ಲಿ ಅವಳಿಗಿಂತ ತಾನು ಒಂದು ಹೆಜ್ಜೆ ಹಿಂದಿದ್ದೇನೆಂಬ ಭಾವನೆ. ಕೆಲವೊಮ್ಮೆ ಕೀಳರಿಮೆ. ಇದೊಂದು ಥರದ ವಿಚಿತ್ರ ಸಂಬಂಧ. ಒಬ್ಬಳಿಗೆ ಏಳಿಗೆಯಾದರೆ ಸಣ್ಣ ಸಂಕಟ. ಅದೇ ಅವಳಿಗೇನಾದರೂ ಕಷ್ಟ ಬಂದರೆ ಅದಕ್ಕೂ ಸಂಕಟ. 'ಒಳ್ಳೆಯದಾಗಲಿ ದೇವರೇ...' ಎನ್ನುವ ಹಾರೈಕೆ. ಹಾಗೂ ಅನಿಸುವ, ಹೀಗೂ ಅನಿಸುವ ದ್ವಂದ್ವ ನಿಲುವು. 'ಹುಟ್ಟುತ್ತಾ ಅಣ್ಣತಮ್ಮಂದ್ರು, ಬೆಳೀತಾ ದಾಯಾದಿಗಳು' ಎಂದು ಗಂಡುಮಕ್ಕಳ ವಿಷಯದಲ್ಲಿ ಸಲೀಸಾಗಿ ಹೇಳುವಂತೆ ಈ ಸೋದರಿಯರ ಸಂಬಂಧದ ಬಗ್ಗೆ ಹೇಳಿಕೆಗಳೇನಿಲ್ಲ. ಹೀಗೆ ಸ್ವಂತ ಮನೆಯ ಒಡತಿಯಾಗಬೇಕೆಂಬ ಪಿತ್ಥ ನೆತ್ತಿಗೆ ಏರಿದ್ದೇ ಸಂತೋಷನ ಅಮ್ಮ ಕೂತಲ್ಲಿ, ನಿಂತಲ್ಲಿ ಗಂಡನ ತಲೆ ತಿನ್ನಲು ಶುರು ಮಾಡಿಬಿಟ್ಟಳು.

'ಸಾಲ ಮಾಡಿಯಾದ್ರೂ ತುಪ್ಪ ತಿನ್ನು' ಅಂತ ಗಾದೆ ಇದೆ. ಈ ಬೆಂಗಳೂರು ಅನ್ನೋದು ದಿನಕ್ಕೊಂದು ಥರ ಬಣ್ಣ ಬದಲಾಯಿಸ್ತಿದೆ. ನೀವು ಬಾಯಿಗೆ ಕಡುಬು ತುಂಬ್ಕಂಡು ತೆಪ್ಪಗೆ ಕೂತಿದ್ರೆ ನಮ್ಮ ಹಣೇಬರಕ್ಕೆ ಬಾಡಿಗೆ ಮನೇನೇ ಗತಿ. ಯಾರಿಗ್ಗೊತ್ತು, ನಾಳೆ ಬಾಡಿಗೆ ಕಟ್ಟೋಕೂ ಸಾಧ್ಯ ಆಗಲ್ಲ ಅನ್ನೋ ಕಾಲ ಬಂದ್ರೂ ಆಶ್ಚರ್ಯ ಇಲ್ಲ.

ದಿನಬೆಳಗಾದರೆ ಇಂಥ ಮಾತು ಕೇಳಿ ಕೇಳಿ ಕೇಳಿ ಅಪ್ಪನಿಗೂ ಬಿಸಿ ಮುಟ್ಟಿತು. ಆಗಿನ್ನೂ ಬೆಂಗಳೂರು ಈ ಪರಿ ಬೆಳೆದಿರಲಿಲ್ಲ. ವಸತಿ ಸಂಕೀರ್ಣಗಳ ಭರಾಟೆ ಶುರುವಾಗಿರಲಿಲ್ಲ. ಊರಿನ ಹೊರಹೊರಗೆ ಅನ್ನುವಂತಿದ್ದ ಹೊಸ ಬಡಾವಣೆಯೊಂದರಲ್ಲಿ ಕೊನೆಗೂ ಅಪ್ಪ 30–50ರ ಒಂದು ನಿವೇಶನ ಖರೀದಿಸಿದರು. ಹೆಮ್ಮೆಯ ಭೂಮಾಲೀಕರಾದರು. ಮನೆ ಕಟ್ಟಿಸುವಾಗ ಅಮ್ಮ ನಿರ್ಮೋಹದಿಂದ ತನಗೆ ತವರುಮನೆಯಲ್ಲಿ ಹಾಕಿದ್ದ ಎರಡೆಳೆ ಅವಲಕ್ಕಿ ಸರ, ಗಂಡ ಮಾಡಿಸಿಕೊಟ್ಟಿದ್ದ ಒಂದು ಜೊತೆ ಬಳೆಯನ್ನು ಮಾರಲು ಕೊಟ್ಟಿದ್ದಳಂತೆ. ಮೇಲೆ ಬ್ಯಾಂಕಿನ ಸಾಲ. ಎರಡು ರೂಮಿನ ಸಣ್ಣ ಮನೆ ಅಮ್ಮನ ಪಾಲಿಗೆ ಭೂ ವೈಕುಂಠ. ಈ ಮನೆಗೆ ಸ್ಥಳಾಂತರಗೊಳ್ಳುವಾಗ ಸಂತೋಷನ ಅಕ್ಕ ಶಾಲಿನಿಗೆ ನಾಲ್ಕು ವರ್ಷ ಮತ್ತು ಸಂತೋಷ ವರ್ಷ ತುಂಬುವುದರಲ್ಲಿದ್ದ ಕೈಗೂಸು. ಊರ ಹೊರಗಿನ ಬಡಾವಣೆ ಈಗ ಊರಿನ ನಡುಮಧ್ಯಕ್ಕೆ ಸೇರಿ ಹೋಗಿ ಪ್ರತಿಷ್ಠಿತ ಬಡಾವಣೆ ಅನಿಸಿಕೊಂಡಿದೆ. ಇಂಚಿಂಚು ಜಾಗಕ್ಕೂ ಚಿನ್ನದ ಬೆಲೆ. ಸಾವಿರಗಳ ಲೆಕ್ಕದಲ್ಲಿ ಕೊಂಡಿದ್ದು ಕೋಟಿಗಳ ಲೆಕ್ಕದಲ್ಲಿ ಬೆಲೆಬಾಳುತ್ತಿದೆ.

'ಹೇಳಿ ಹೇಳಿ ಕರ್ಕರೆ ಹಿಡಿಸಿದ್ದಕ್ಕೆ ನಿಮ್ಮಪ್ಪ ಮನೆ ಕಟ್ಟೋ ಮನಸ್ಸು ಮಾಡಿದ್ದು. ನಾನು ಕೈ ತೊಳ್ಕೊಂಡು ಬೆನ್ನು ಹತ್ತಿರ್ಲಿಲ್ಲ ಅಂದ್ರೆ...' ಎನ್ನುತ್ತಾ ಕೋಟ್ಯಾಧೀಶರಾಗಿರುವ ಎಲ್ಲಾ ಯಶಸ್ಸನ್ನೂ ತನ್ನ ಮುಡಿಗೇರಿಸಿಕೊಂಡು ಬೀಗುತ್ತಿರುತ್ತಾಳೆ ಅಮ್ಮ, ಮೂಗಿನ ನತ್ತು ತಿರುಗಿಸುತ್ತಾ. ಅಪ್ಪನಿಗೂ ಈ ಬಗ್ಗೆ ಹೆಮ್ಮೆ ಇಲ್ಲದೆ ಇಲ್ಲ. ಮನೆಮಂದಿ ಬಿಡುವಾಗಿ ಕೂತಾಗಲೆಲ್ಲಾ ಈ ಕುರಿತಾದ ಮಾತು ಅಪ್ಪನ ಬಾಯಿಂದ ಉದುರುತ್ತಿರುತ್ತದೆ ಮತ್ತು ಅಪ್ಪ ಹೇಳಿದ್ದನ್ನೇ ಹೇಳುತ್ತಿರುವುದು ಜಾಸ್ತಿಯಾಗಿದೆ ಅನ್ನುತ್ತದೆ ಸಂತೋಷನ ಅನುಭವ. ಎಷ್ಟಾಯ್ತು ಅಪ್ಪನಿಗೆ? ಎಪ್ಪತ್ತೈದರ ಆಸುಪಾಸು. 'ಸ್ವಂತ ಮನೆ' ಎಂದು ಅಮ್ಮ ಹಗಲೂ ರಾತ್ರಿ ಕನವರಿಸುತ್ತಿದ್ದುದರ ಕಾರಣದ ಕುರಿತಾಗಿ ಅಪ್ಪನ ಬಾಯಿಂದ ಕೇಳಿ ಕೇಳಿ ಸಂತೋಷ ಅಮ್ಮನ ಹತ್ತಿರ ತಮಾಷೆ ಮಾಡುವುದೂ ಉಂಟು. 'ಕ್ರೆಡಿಟ್ ಏನಿದ್ರೂ ಚಿಕ್ಕಿಗೆ. ಅವಳು ಮನೆ ಕಟ್ಟಿಸ್ದಿದ್ರೆ ಸ್ವಂತ ಮನೆ ಬೇಕು ಅಂತ ನಿಂಗೆ ಚಡಪಡಿಕೆ ಶುರುವಾಗ್ತಿರ್ಲಿಲ್ಲ. ಅಪ್ಪ ಕೂಡ ಮನಸ್ಸು ಮಾಡ್ತಿರ್ಲಿಲ್ಲ...'

'ಅದೆಲ್ಲಾ ಒಂದು ಯೋಗ. ಆಗೋ ಕಾಲಕ್ಕೆ ಎಲ್ಲಾ ತನ್ನಿಂತಾನೇ ಆಗಿ ಬಿಡುತ್ತೆ. ಯಾರೋ, ಯಾವುದೋ ಅದಕ್ಕೆ ನೆಪ ಆಗ್ತಾರೆ ಅಷ್ಟೇ...' ಎನ್ನುವ ಮಾತನ್ನೂ ಅದೇ ಅಮ್ಮ ಆಡುತ್ತಿದ್ದಳು, ಮನೆ ನಿರ್ಮಾಣಕ್ಕೆ ತಾನು ಕಾರಣಳಾಗಿದ್ದು ಎನ್ನುವ ಬಿಂಕವನ್ನು ಮರೆತು.

***

ಸಂತೋಷ ಕೊಂಚ ಅಳುಕಿನಿಂದಲೇ ತನ್ನ ಯೋಜನೆಯನ್ನು ಅಪ್ಪನ ಮುಂದೆ ತೆರೆದಿಟ್ಟಿದ್ದ, 'ಒಂದು ಮನೆ ನೋಡಿದೀನಿ ಅಪ್ಪಾ. ಆಫೀಸಿಗೆ ಅರ್ಧಕ್ಕರ್ಧ ದೂರ ಕಮ್ಮಿ ಆಗುತ್ತೆ. ನೀನು ನೋಡಿ ಹೂಂ ಅಂದ್ರೆ...' ಅವಾಕ್ಕಾಗಿದ್ದರು ಅಪ್ಪ.

'ಇಷ್ಟು ವರ್ಷ ಓಡಾಡಿಲ್ವೇನೋ? ಇಷ್ಟು ಅನುಕೂಲದ ಮನೆ ಇರ್ಬೇಕಾದ್ರೆ ಮತ್ತ್ಯಾಕೆ ಇನ್ನೊಂದು?'